

ವಿದುಷಿ ಶ್ಯಾಮಲಾ ಭಾವೆ ಹಾಗೂ ವಿದೂಷಿ ನಾಗಮಣಿ ಶ್ರೀನಾಥ್ ಅವರ ಜುಗಲಬಂದಿಗಳನ್ನು ನೆನಪಿಸಿಕೊಳ್ಳಬಹುದು.

ಡಾ. ಎಲ್. ಸುಬ್ರಮಣ್ಯಮ್ ಮಹಾನ್ ವಿದ್ವಾಂಸರು. ತಮ್ಮ ಸೋಲೋ ವಯಲಿನ್ ಕಛೇರಿಗಳಲ್ಲಿ ಕ್ಲಾಸಿಕಲ್ ಹಾಗೂ ವೆಸ್ಟರ್ನ್ ಶೈಲಿಗಳನ್ನು ನುಡಿಸಿ ರಸಿಕರಿಗೆ ಹೊಸ ರೀತಿಯ ರಸದೌತಣವನ್ನು ಕೊಡುತ್ತಾರೆ. ಈಗ ವಾತಾಪಿ ಗಣಪತಿಂ, ಭಜೀಹಂ ಎಂಬ ಕೃತಿಯನ್ನು ಬೇರೆ ಬೇರೆ ವಿಧದಲ್ಲಿ ನುಡಿಸುತ್ತಾರೆ, ಹಾಡುತ್ತಾರೆ. ಶಾಸ್ತ್ರೀಯ ಶೈಲಿಗಳಲ್ಲಿ ಬೇರೆ ಬೇರೆ ವಾದ್ಯಗಳನ್ನು ಉಪಯೋಗಿಸಿಕೊಂಡು ಅನೇಕ ಕಾರ್ಯಕ್ರಮಗಳನ್ನು ಈಗಿನ ಯುವ ಸಂಗೀತಗಾರರು, ಹೊಸ ರೀತಿಯಲ್ಲಿ ನಡೆಸಿಕೊಡುತ್ತಿದ್ದಾರೆ.

ತಂತ್ರಜ್ಞಾನ ಮಾತ್ರವಲ್ಲದೆ ಇವತ್ತಿನ ಜಾಗತಿಕ ಸಂಗೀತ ಪ್ರೇಮಿಗಳು ಹೊಸ ರೀತಿಯ ಹಾಗು ವಿಭಿನ್ನವಾದ ಸಂಗೀತವನ್ನು ಕೇಳಲು ಇಷ್ಟಪಡುತ್ತಾರೆ ಹಾಗೂ ಮೆಚ್ಚುಗೆಯನ್ನು ಸೂಚಿಸುತ್ತಾರೆ. ಅಂತರ್ಜಾಲ ಪ್ರಸ್ತುತಿಯನ್ನು ನಾವು ಒಂದು ನೇರ ಸಂಗೀತ ಕಛೇರಿಗೆ ಹೋಲಿಸಲು ಸಾಧ್ಯವಿಲ್ಲ. ಏಕೆಂದರೆ ಆನ್‌ಲೈನ್‌ನಲ್ಲಿ ನಾವು ವೀಕ್ಷಕರನ್ನು ನೋಡುವುದೇ ಇಲ್ಲ. ಯಾರಿಗೆ ಹಾಡುತ್ತಿದ್ದೇವೆ? ಎಂಬ ಪ್ರಶ್ನೆ ಬರುತ್ತದೆ. ಜನರಿಂದ ಚಪ್ಪಾಳೆಯಾಗಲಿ, ಮೆಚ್ಚುಗೆಉ ಉದ್ಗಾರಗಳಾಗಲೀ ಕೇಳುವುದಂತೂ ದೂರದ ಮಾತು. ಹಿಂದೆ ಒಬ್ಬ ಕಲಾವಿದ ತನ್ನ ವೀಕ್ಷಕರನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಕಾರ್ಯಕ್ರಮವನ್ನು ಪ್ಲಾನ್ ಮಾಡುತ್ತಿದ್ದ. ಆದರೆ ಈಗ ಡಿಜಿಟಲ್ ಸಂದರ್ಭದಲ್ಲಿ ಪ್ರೇಕ್ಷಕರು ಯಾರು (ಸಾಮಾನ್ಯ, ಭಾರತೀಯ, ವಿದೇಶಿ) ಎನ್ನುವುದನ್ನೂ ಕಲಾವಿದರು ಯೋಚನೆ ಮಾಡಬೇಕಾಗಿದೆ, ಮಾಡಿದ್ದಾರೆ ಕೂಡ.

2020ರ ವಿಶ್ವ ಭೂದಿನದ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ರಿಕಿ ಕೇಜ್ ಎನ್ನುವ ಸಂಗೀತ ಸಂಯೋಜಕರು ಆರು ದೇಶಗಳ 40 ಮಂದಿ ಕಲಾವಿದರನ್ನು ಒಟ್ಟುಗೂಡಿಸಿ, ತಮ್ಮ ತಮ್ಮ ಮನೆಗಳಿಂದಲೇ ಒಂದು ಉತ್ತಮವಾದ ಸಂಗೀತ ಕಾರ್ಯಕ್ರಮ ರೂಪಿಸಿದ್ದರು. ವಿದುಷಿ ಸುಧಾ ರಘುನಾಥನ್ ಹಾಗೂ ಎಸ್. ಮಹತಿ ಅವರು '47 voices in one' ಎಂಬ ಕಾರ್ಯಕ್ರಮ ನೀಡಿದ್ದಾರೆ. ಇದರಲ್ಲಿ 47 ಗಾಯಕರು 'ಮೈತ್ರೀಂಭಜತಾ' ಗೀತೆಯನ್ನು ಒಕ್ಕೊರಲಿನಿಂದ ಹಾಡಿದ್ದಾರೆ. ದೂರ ದೂರ ಇದ್ದುಕೊಂಡು (ಸೋಷಿಯಲ್ ಡಿಸ್ಟೆನ್ಸಿಂಗ್), ಮತ್ತೊಂದು ವಿಡಿಯೋ ಕಾಲ್‌ನಲ್ಲಿ ರಾಗ ಅಂತರಾಕ್ಷರಿಯನ್ನು ಗಾಯಕಿ ಸುಧಾ ರಘುನಾಥನ್ ಹಾಗು ಸಂದೀಪ್ ನಾರಾಯಣ ಅವರು ಹಾಡಿ ತಮ್ಮ ಪ್ರತಿಭೆಗಳನ್ನು ತೋರಿಸುತ್ತಾರೆ; ಒಂದು ವಿಡಿಯೊ ಕಾಲ್ ಮೂಲಕ. ಇದು ಏನನ್ನು ಸೂಚಿಸುತ್ತದೆಂದರೆ, ಸಂಗೀತವು ಬರೀ ಸಂಗೀತ ಮಾತ್ರವಲ್ಲದೆ – ಹಾಡುವವನು ಯಾರು? ಅವರ ವ್ಯಕ್ತಿತ್ವ? ಇವೆಲ್ಲದರ ಅಭಿವ್ಯಕ್ತಿಯೂ ಆಗಿರುತ್ತದೆ.

ಅನೇಕ ಕಲಾವಿದರು, ಲಾಕ್‌ಡೌನ್ ಸಮಯದಲ್ಲಿ ಸಂಗೀತ ತರಬೇತಿಗಳನ್ನು, ಉಪನ್ಯಾಸ, ಪ್ರದರ್ಶನ, ರೆಕಾರ್ಡಿಂಗ್ಸ್, ಸಂದರ್ಶನ ಇತ್ಯಾದಿಗಳಿಗೆ ಆನ್‌ಲೈನ್ ವೇದಿಕೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ.

'ಕೋವಿಡ್ 19' ಕಾಲಘಟ್ಟವು ಕಲಾವಿದರನ್ನು ಬೇರೆ ಬೇರೆ ರೀತಿಯಲ್ಲಿ ಪ್ರಚೋದಿಸಿದೆ. ಫಂಡ್ ರೈಸಿಂಗ್ ಕಾರ್ಯಕ್ರಮಗಳನ್ನು ಮಾಡಿ ಜನರಿಗೆ ಸಹಾಯ ಮಾಡುತ್ತಿದ್ದಾರೆ. 'ಸಮರ್ಪಣ' ಸ್ವಯಂ ಸೇವಾಸಂಸ್ಥೆ ಮೂಲಕ ವಿವಿಧ ಇವೆಂಟ್‌ಗಳನ್ನು ಆಯೋಜಿಸಿ, ಬಂದ ಹಣದಿಂದ ವಲಸೆ ಕಾರ್ಮಿಕರಿಗೆ ಹಾಗೂ ಕಲಾವಿದರಿಗೆ ನೆರವಾಗುತ್ತಿದ್ದಾರೆ.

ಆನ್‌ಲೈನ್ ವೇದಿಕೆ ಈಗಿನ ಯುವ ಪೀಳಿಗೆಗೆ ಒಂದು ವರವೇ ಸರಿ. ಪ್ರತಿಭಾವಂತ ಯುವ ಕಲಾವಿದರಿಗೆ ತಮಗೆ ಬೇಕಾದ, ಕೈಗೆಟುಕುವ ರೆಕಾರ್ಡಿಂಗ್ಸ್, ಮಾತುಕತೆಗೆ ಅಂತರ್ಜಾಲ ಸಹಾಯಕವಾಗಿದೆ.

ಗ್ಲೋಬಲ್ ಮ್ಯೂಸಿಕ್ ಟ್ರೆಂಡ್, ನಮ್ಮ ಸಾಂಪ್ರದಾಯಿಕ ಚೌಕಟ್ಟಿನಿಂದ ಸ್ವಲ್ಪ ಭಿನ್ನವಾದುದು ಎನ್ನಿಸಿದರೂ, ಸಂಗೀತದ ಬೆಳವಣಿಗೆಗೆ ಹಾಗು ಸಾಧನೆಗೆ ಇದು ಪೂರಕವಾಗಿಯೇ ಇದೆ. ಇದು ಹೊಸ ರೀತಿಯಲ್ಲಿ ಬೆಳೆಯುತ್ತಾ, ಕಲಾವಿದರಲ್ಲಿ ಸ್ಫೂರ್ತಿ ತುಂಬುತ್ತಿದೆ. ದೇಶ ವಿದೇಶಗಳಿಂದ ಬೇರೆ ಬೇರೆ ಕಲಾವಿದರನ್ನು, ಗಾಯಕರನ್ನು ಒಟ್ಟುಗೂಡಿಸುವ ಒಂದು ಒಗ್ಗಟ್ಟಿನ ಶಕ್ತಿಯಾಗಿದೆ.

ಸಂಗೀತದ ಬೆಳವಣಿಗೆ ಒಂದು ಆವರ್ತಕ! ಕಲಾವಿದರು ತಾವು ಹಿಂದೆ ಕೇಳಿ, ಬೆಳೆದುಬಂದ, ಸಂಗೀತವನ್ನು ಮತ್ತೆ ಮತ್ತೆ ಮೆಲುಕು ಹಾಕುತ್ತಾರೆ. ಹಳೆಯ ರಸದಿಂದ ಹೊಸದಾದ ರಸ ಹುಟ್ಟುತ್ತದೆ ಎಂದು ಹೇಳಬಹುದು. ಸಾಂಪ್ರದಾಯಿಕವಾಗಿ ಒಂದೇ ಕಾಲಕ್ಕೆ ಅಂಟಿಕೊಳ್ಳದೆ, ಈಗಿನ ಸಂಗೀತ ಬೆಳವಣಿಗೆ, ಬಹಳ ಉತ್ಸಾಹದಿಂದ, ಹುರುಪಿನಿಂದ, ಮುನ್ನುಗ್ಗುತ್ತಿದೆ, ಬೆಳೆಯುತ್ತಿದೆ! ಇದರಿಂದ ಕೇಳುವವರಿಗೆ ಹಾಗು ಕಲಾವಿದರಿಗೇ ಒಳ್ಳೆಯದೇ ಆಗಲಿ ಎಂದು ಆಶಿಸೋಣ. ■